ಒಬ್ಬ ಮಾನ್ಯ ಸದಸ್ಯರು.—ಕೆಲವು ಪ್ರಶ್ನೆಗಳಿಗೆ ಅರ್ಧ ಗಂಟೆಯ ಸಮಯ ಕೊಟ್ಟು, ಇನ್ನುಳಿದ ಪ್ರಶ್ನೆಗಳನ್ನು ತೆಗೆದುಕೊಳ್ಳದಿದ್ದರೆ ಹೇಗೆ ? ಇನ್ನುಳಿದ ಪ್ರಶ್ನೆಗಳನ್ನು ಸಹ ತೆಗೆದುಕೊಂಡು ಒಂದೊಂದು ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು —ಹನ್ನೆರಡೂವರೆ ಗಂಟೆಯವರೆಗೆ ಪ್ರಶ್ನೋತ್ತರಗಳನ್ನು ಮಾಡೋಣ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಅದು ತಮ್ಮ ಕೈಯಲ್ಲಿದೆ ಸ್ವಾಮಿ.

ಉಪಾಧ್ಯಕ್ಷರು —ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಗಿಂತ ಮುಂದೆ ತೆಗೆದುಕೊಂಡು ಹೋಗಬೇಕಾದರೆ ಸದನ ಒಪ್ಪಿಗೆ ಕೊಟ್ಟರೆ ಮಾಡಬಹುದು. ಅದು ಬಿಟ್ಟು ನಾವೇ ಸ್ವೇಚ್ಛೆಯಿಂದ ಮಾಡುವುದು ಕೆಟ್ಟ ಸಂಪ್ರದಾಯವಾಗುತ್ತದೆ. ಸಭೆ ಒಪ್ಪಿಗೆ ಕೊಟ್ಟರೆ ಹನ್ನೆರಡು ಗಂಟೆವರೆಗೆ ಮುಂದುವರೆಸೋಣ. ಶ್ರೀ ರೇವಣಸಿದ್ದಯ್ಯನವರೇ ನೀವು ಕೇಳಿ.

ಬಳ್ಳಾರಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಚಟುವಟಿಕೆಗಳು

೩೦೪. ಶ್ರೀ ಬಿ ಎಂ. ರೇವಣ್ಣಸಿದ್ದಯ್ಯ (ಶಿರಗುಪ್ಪ).—ಮಾನ್ಯ ರಾಜ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಬಳ್ಳಾರಿ ಜಿಲ್ಲೆಯಲ್ಲಿ ೧೯೪೪–೪೫ನೇ ಸಾಲಿನಲ್ಲಿ ಅರಣ್ಯ ಖಾತೆಗೆ ಸರ್ಕಾರದವರು ಮಾಡಿರುವ ತಾಲೂಕುವಾರು ಖರ್ಚೆಷ್ಟು ?

(ಆ) ಆ ಪೈಕಿ ತಾಲೂಕುವಾರು ಸಿಬ್ಬಂದಿಯವರಿಗೆ ಆಗಿರುವ ಖರ್ಚೆಷ್ಟು ?

(ಇ) ಆ ಪೈಕಿ ತಾಲೂಕುವಾರು ಗಿಡ ನೆಡುವುದಕ್ಕಾಗಿ ಮಾಡಿರುವ ಖರ್ಚೆಷ್ಟು ?

(ಈ) ೧೯೪೪–೪೫ರಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಗಿಡ ನೆಡಲಾಗಿದೆ. (ತಾಲೂಕುವಾರು ವಿವರಗಳನ್ನು ಒದಗಿಸುವುದು).

(ಉ) ಎಷ್ಟು ಮೈಲು ರಸ್ತೆಯ ಅಕ್ಕಪಕ್ಕದಲ್ಲಿ ಗಿಡ ನೆಡಲಾಗಿದೆ ?

ಶ್ರೀ ಬಿ. ವಿ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ೪೪–೪೫ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ತಾಲೂಕುವಾರು ಖರ್ಚಾದ ವೆಚ್ಚ ಈ ರೀತಿ ಇದೆ.—

			ರೂ. ಲಕ್ಷದಲ್ಲಿ
೧	ಹರಪನಹಳ್ಳಿ ತಾಲ್ಲೂಕು	...	೨೨,೮೭,೯೪೪–೦೦
೨	ಸೊಂಡೂರು ತಾಲ್ಲೂಕು	...	೧೦,೩೧,೩೬೪–೦೦
೩	ಹಡಗಲಿ ತಾಲ್ಲೂಕು	...	೭,೪೪,೦೩೭–೦೦
೪	ಕೂಡ್ಲಿಗಿ ತಾಲ್ಲೂಕು	...	೧೦,೮೯,೫೭೨–೦೦
೫	ಹೊಸಪೇಟೆ ತಾಲ್ಲೂಕು	...	೮,೯೦,೩೨೭–೦೦
೬	ಬಳ್ಳಾರಿ ತಾಲ್ಲೂಕು	...	೧೫,೯೪,೬೩೪–೦೦
೭	ಶಿರಗುಪ್ಪ ತಾಲ್ಲೂಕು	...	೩,೫೩,೮೭೯–೦೦
೮	ಹಗರಿಬೊಮ್ಮನಹಳ್ಳಿ ತಾಲ್ಲೂಕು	...	೫,೬೭,೮೦೯–೦೦

(ಆ) ೪೪–೪೫ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಿಬ್ಬಂದಿಗಾಗಿ ಖರ್ಚಾಗಿರುವ ತಾಲೂಕುವಾರು ವಿವರವು ಈ ರೀತಿ ಇದೆ.—

೧	ಹರಪನಹಳ್ಳಿ ತಾಲ್ಲೂಕು	...	೩,೫೭ ೩೭೧–೦೦
೨	ಸೊಂಡೂರು ತಾಲ್ಲೂಕು	...	೨,೪೩ ೬೦೯–೦೦
೩	ಹಡಗಲಿ ತಾಲ್ಲೂಕು	...	೩೯,೬೪೨–೦೦

೪	ಕೂಡ್ಲಿಗಿ ತಾಲ್ಲೂಕು	...	೨,೮೬,೦೦೦-೦೦
೫	ಹೊಸಪೇಟೆ ತಾಲ್ಲೂಕು	...	೨,೩೭,೧೩೪-೦೦
೬	ಬಳ್ಳಾರಿ ತಾಲ್ಲೂಕು	...	೪,೦೪,೨೨೦-೦೦
೭	ಶಿರಗುಪ್ಪ ತಾಲ್ಲೂಕು	...	೩೮,೨೩೯-೦೦
೮	ಹಗರಿಬೊಮ್ಮನಹಳ್ಳಿ ತಾಲ್ಲೂಕು	...	೩೬,೧೭೫-೦೦

(೫) ೮೪-೮೫ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಗಿಡನೆಡುವುದಕ್ಕಾಗಿ ಖರ್ಚಾದ ತಾಲೂಕುವಾರು ವಿವರವು ಈ ರೀತಿ ಇದೆ.

	ಹರಪನಹಳ್ಳಿ ತಾಲ್ಲೂಕು	..	೧೯,೩೦,೬೨೩-೦೦
೨	ಸೊಂಡೂರು ತಾಲ್ಲೂಕು	...	೭,೦೮,೧೯೪-೦೦
೩	ಹಡಗಲಿ ತಾಲ್ಲೂಕು	...	...
೪	ಕೂಡ್ಲಿಗಿ ತಾಲ್ಲೂಕು	...	೮,೦೩,೫೭೨,೦೦
೫	ಹೊಸಪೇಟೆ ತಾಲ್ಲೂಕು	...	೬,೫೩,೦೯೩-೦೦
೬	ಬಳ್ಳಾರಿ ತಾಲ್ಲೂಕು	...	೧೧,೯೦,೪೦೩-೦೦
೭	ಶಿರಗುಪ್ಪ ತಾಲ್ಲೂಕು	...	೩,೦೫,೬೩೯-೦೦
೮	ಹಗರಿಬೊಮ್ಮನಹಳ್ಳಿ ತಾಲ್ಲೂಕು	...	೫,೩೧,೬೩೩-೦೮

(ಈ) ಬಳ್ಳಾರಿ ಜಿಲ್ಲೆಯಲ್ಲಿ ೧೯೮೪-೮೫ನೇ ಸಾಲಿನಲ್ಲಿ ೬೬೪ ಹೆಕ್ಟೇರ್ ಜಮೀನಿನಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ. ತಾಲೂಕುವಾರು ವಿವರಗಳು ಈ ರೀತಿ ಇದೆ.—

೧	ಹರಪನಹಳ್ಳಿ ತಾಲ್ಲೂಕು	...	೨೧೯	ಹೆಕ್ಟೇರು
೨	ಸೊಂಡೂರು ತಾಲ್ಲೂಕು	...	೧೩೨	,,
೩	ಹಡಗಲಿ ತಾಲ್ಲೂಕು	...	೨೭	,,
೪	ಕೂಡ್ಲಿಗಿ ತಾಲ್ಲೂಕು	...	೬೫	,,
೫	ಹೊಸಪೇಟೆ ತಾಲ್ಲೂಕು	...	೧೦೦	,,
೬	ಶಿರಗುಪ್ಪ	...	೨೬	,,
೭	ಹಗರಿಬೊಮ್ಮನಹಳ್ಳಿ ತಾಲ್ಲೂಕು	...	೫೫	,,
೮	ಬಳ್ಳಾರಿ	...	೫೦	,,

(ಉ) ಬಳ್ಳಾರಿ ಜಿಲ್ಲೆಯಲ್ಲಿ ೧೯೮೪-೮೫ನೇ ಸಾಲಿನಲ್ಲಿ ೩೫ ಕಿ.ಮೀ. ಉದ್ದದ ರಸ್ತೆಗಳ ಪಕ್ಕದಲ್ಲಿ ಗಿಡಮರಗಳನ್ನು ನೆಡಲಾಗಿದೆ.

ಶ್ರೀ ಬಿ. ಎಂ. ರೇವಣಸಿದ್ದಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಹಡಗಲಿ ತಾಲ್ಲೂಕಿನಲ್ಲಿ ೭ ಲಕ್ಷ ೪೮ ಸಾವಿರ ಖರ್ಚಾಗಿದ್ದು, ಶಿರಗುಪ್ಪ ತಾಲ್ಲೂಕಿಗೆ ೩ ಲಕ್ಷ ೫೩ ಸಾವಿರ ಆಗಿದೆ. ತೆಗೆದುಕೊಂಡಿರುವ ವಿಸ್ತೀರ್ಣ ಒಂದೇ ಇದ್ದರೂ ಕೂಡ, ಹಡಗಲಿಯಲ್ಲಿ ೭ ಲಕ್ಷ ೪೮ ಸಾವಿರ ಇದ್ದರೆ, ಶಿರಗುಪ್ಪದಲ್ಲಿ ೩ ಲಕ್ಷ ೫೩ ಸಾವಿರ ಇದೆ. ವಿಸ್ತೀರ್ಣ ಒಂದೇ ಇದ್ದು, ವೆಚ್ಚ ಮಾತ್ರ ಒಂದು ತಾಲ್ಲೂಕಿನದ್ದು ಇನ್ನೊಂದು ತಾಲ್ಲೂಕಿನ ಎರಡರಷ್ಟು ಇದೆ. ಮತ್ತು ಹಗರಿಬೊಮ್ಮನಹಳ್ಳಿಯಲ್ಲಿ ೫೫ ಹೆಕ್ಟೇರ್‌ನಲ್ಲಿ ನೆಡುತೋಪು ಬೆಳೆಸಿದ್ದರೆ ಬಳ್ಳಾರಿ ತಾಲ್ಲೂಕಿನಲ್ಲಿ ೫೦ ಹೆಕ್ಟೇರ್ ಇದೆ. ಆದರೆ ಇದರ ಖರ್ಚು, ಹಗರಿಹೊಮ್ಮನಹಳ್ಳಿಯಲ್ಲಿ ೫ ಲಕ್ಷ ೬೭ ಸಾವಿರ ಆಗಿದ್ದರೆ, ಬಳ್ಳಾರಿ ತಾಲ್ಲೂಕಿನಲ್ಲಿ ೧೫ ಲಕ್ಷ ೯೪ ಸಾವಿರ ಆಗಿದೆ. ಬಹಳಷ್ಟು ಅಂತರ ಇರುವುದು ಕಂಡು ಬರುತ್ತದೆ.

ಆದ್ದರಿಂದ ಇದರಲ್ಲಿ ಸಂಶಯ ಬರುತ್ತದೆ. ಈ ಪೆಚ್ಚು ನಿಜವಾಗಿಯೂ ಆಗಿದೆಯೇ, ಅಥವಾ ಕ್ರೂಕ್ಡ್ ಫಿಗರ್ಸ್ ಏನಾದರೂ ಕೊಟ್ಟಿದ್ದಾರೆಯೋ ಎಂದು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸುತ್ತಾರೆಯೆ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಸ್ಥಳದಿಂದ ಸ್ಥಳಕ್ಕೆ ಟ್ರಾಂಚ್ ಮಾಡಬೇಕಾದರೆ ಸ್ವಲ್ಪ ವ್ಯತ್ಯಾಸ ಬರುತ್ತದೆ. ಕೆಲವು ಕಡೆ ಸ್ವಲ್ಪ ಹೆಚ್ಚು ಖರ್ಚಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಒಂದು ಟಾರ್ಜೆಟ್ ಇದ್ದು, ಅದನ್ನು ಅಚೀವ್ ಮಾಡಲಿಕ್ಕೆ ೭೫ ಲಕ್ಷ ರೂಪಾಯಿಗಳಲ್ಲಿ ಸ್ಯಾಫ್ ಕಾಂಪೋನೆಂಟ್‌ಗೆ ಬರೇ ೧೪ ಪರ್ಸೆಂಟ್ ಮಾತ್ರ ಖರ್ಚಾಗಿದೆ. ಇದರಲ್ಲಿ ಸ್ಥಳದಿಂದ ಸ್ಥಳಕ್ಕೆ ಅನೇಕ ಕಾರ್ಯಕ್ರಮಗಳು ಇವೆ. ಪ್ರತಿಯೊಂದು ಸ್ಥಳಕ್ಕೂ ಒಂದೇ ರೀತಿಯ ಟ್ರಾಂಚ್ ಮಾಡಲಿಕ್ಕೆ ಸಾಧ್ಯವಿಲ್ಲ. ಒಂದೊಂದೇ ಸ್ಥಳಕ್ಕೆ ಮಾಡಬೇಕಾಗುತ್ತದೆ. ಆದ್ದರಿಂದ ಈ ವ್ಯತ್ಯಾಸ ಇರುತ್ತದೆ. ಇದರಲ್ಲಿ ಹಣ ಪೋಲಾಗಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

೧೯೮೫-೮೬ರ ಸಾಲಿನಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಬರುವ ಲೋಕೋಪಯೋಗಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಹಣ ಕುರಿತು

೧೪೬. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫-೮೬ನೇ ಸಾಲಿಗೆ ಸಂಬಂಧಿಸಿದಂತೆ ತರೀಕೆರೆ ತಾಲೂಕಿಗೆ ಕಾಮಗಾರಿಗಳಿಗಾಗಿ ಒದಗಿಸಲಾದ ಒಟ್ಟು ಮೊಬಲಗೆಷ್ಟು ?

(ಆ) ಆ ಪೈಕಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ೧೯೮೫-೮೬ನೇ ಸಾಲಿಗೆ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಲ್ಲಿ ಒಟ್ಟು ಹಣ ೫೦.೧೦ ಲಕ್ಷ ರೂಪಾಯಿಗಳು. ವಿವರಗಳು ಈ ಕೆಳಕಂಡಂತಿದೆ.—

ಕಟ್ಟಡ	...	೯.೨೦ ಲಕ್ಷ ರೂಪಾಯಿಗಳು
ಸಂಪರ್ಕ	...	೪೦.೯೦ ಲಕ್ಷ ರೂಪಾಯಿಗಳು
		೫೦.೧೦ ಲಕ್ಷ ರೂಪಾಯಿಗಳು

(ಆ) ತಪಶೀಲುಗಳನ್ನೊಳಗೊಂಡ ಪಟ್ಟಿಯೊಂದನ್ನು ಇದರೊಂದಿಗೆ ಲಗತ್ತಿಸಲಾಗಿದೆ.